ಸತ್ಯವನ್ನರಿತು ಇಡೀ ದೇಶಕ್ಕೆ ಕಲ್ಯಾಣವಾಗುವುದು, ಆ ಮೂಲಕ ಸಮಾಜವೂ ಭದ್ರವಾಗುವುದು" ಎಂದು ಸ್ವಾಮೀಜಿ ನುಡಿದಿದ್ದರು. ಈ ನುಡಿಗಳು ಶಾರದಾಮಠದ ಪ್ರಥಮ ಅಧ್ಯಕ್ಷರಾದ ಪ್ರವ್ರಾಜಿಕಾ ಭಾರತೀಪ್ರಾಣಾ ಮಾತಾಜಿಯವರಲ್ಲಿ ಸಾಕಾರಗೊಂಡಿತು ಎಂದು ಹೇಳಬಹುದು. (*ಪರಮಪೂಜ್ಯ ಭಾರತೀಪ್ರಾಣಾ ಮಾತಾಜಿಯವರ ಜೀವನಚರಿತ್ರೆಯು 'ವಿವೇಕಪ್ರಭ'ದಲ್ಲಿ ಶೀಘ್ರದಲ್ಲಿಯೇ ಧಾರಾವಾಹಿ ರೂಪದಲ್ಲಿ ಪ್ರಕಟಗೊಳ್ಳಲಿದೆ* –ಸಂ.)

ಕಾಲ ಕಳೆದ ಹಾಗೆ ಶಾರದಾಮಠದ ಅನೇಕ ಶಾಖೆಗಳು ದೇಶವಿದೇಶಗಳಲ್ಲಿ ತಲೆಯೆತ್ತಿದವು. ಮೊಟ್ಟಮೊದಲ ಶಾಖೆಯು ಮದ್ರಾಸಿನಲ್ಲಿ ಆರಂಭವಾಯಿತು. ಇಂದು ಶಾರದಾಮಠದ ಸುಮಾರು ೩೦ ಶಾಖೆಗಳು ಭಾರತದಾದ್ಯಂತ ಕಾರ್ಯನಿರ್ವಹಿಸುತ್ತಿವೆ. ಆಸ್ಟ್ರೇಲಿಯಾ, ಶ್ರೀಲಂಕಾ ಮತ್ತು ದಕ್ಷಿಣ ಆಫ್ರಿಕಾಗಳಲ್ಲಿ ಕೂಡ ಇದರ ಕೇಂದ್ರಗಳು ಸ್ಥಾಪಿತವಾಗಿವೆ. ಕರ್ನಾಟಕದಲ್ಲಿ ಶ್ರೀಶಾರದಾಮಠದ ಮೊದಲ ಶಾಖೆಯು ೨೯ ವರ್ಷಗಳ ಹಿಂದೆ, ಬೆಂಗಳೂರಿನ ಮುನಿರೆಡ್ಡಿಪಾಳ್ಯದಲ್ಲಿ ಆರಂಭವಾಯಿತು. ಅನೇಕ ಸ್ತ್ರೀಭಕ್ತರ ಸಹಕಾರದಿಂದ, ಇದರ ಸೇವಾಕ್ಷೇತ್ರ ವಿಸ್ತಾರವಾಯಿತು. ಹಲವಾರು ರೀತಿಯ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಆರ್ಥಿಕವಾಗಿ ಹಿಂದುಳಿದ ಹೆಣ್ಣುಮಕ್ಕಳಿಗಾಗಿ ಉಚಿತ ಹೊಲಿಗೆ ಮತ್ತು ಕಸೂತಿ ತರಬೇತಿ, 'ನಿವೇದಿತಾ ವಿದ್ಯಾಪೀಠ' ಎಂಬ ಶಾಲೆ – ಇವು ಆರಂಭಗೊಂಡವು. ಈ ಶಾಲೆಯ ಮಕ್ಕಳಿಗೆ ಉಚಿತವಾಗಿ ಊಟ, ತಿಂಡಿಗಳ ವ್ಯವಸ್ಥೆ ಇದೆ. ಇದಲ್ಲದೆ ಹಲವಾರು ವಿದ್ಯಾವಂತ, ಸುಸಂಸ್ಕೃತ ಯುವತಿಯರು ಮಠಕ್ಕೆ ಸೇರಿಕೊಂಡು, ಸ್ವಾಮಿ ವಿವೇಕಾನಂದರ ಕನಸನ್ನು ಸಾಕಾರಗೊಳಿಸುವ ಪಣತೊಟ್ಟಿದ್ದಾರೆ.

ಹತ್ತು ವರ್ಷಗಳ ಹಿಂದೆ ಬೆಂಗಳೂರಿನಿಂದ ಸುಮಾರು ಎಂಬತ್ತು ಕಿ.ಮಿ. ದೂರದ ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಸಿದ್ಧರಬೆಟ್ಟ ಎಂಬ ಹಳ್ಳಿಯಲ್ಲಿ ಶ್ರೀಶಾರದಾಮಠವು ಗ್ರಾಮಾಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಿದೆ. ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಮತ್ತು ಮಕ್ಕಳ ಪುರೋಭಿವೃದ್ಧಿಗಾಗಿ ಅನೇಕ ಚಟುವಟಿಕೆಗಳನ್ನು ಇದರ ಆಶ್ರಯದಲ್ಲಿ ಕೈಗೆತ್ತಿಕೊಂಡಿದೆ. "ಜನರು ಸ್ವಾವಲಂಬಿಗಳಾಗದಿದ್ದರೆ, ಇಡೀ ದೇಶದ ಸಂಪತ್ತು ಕೂಡ, ಒಂದು ಹಳ್ಳಿಗೇ ಸಾಕಾಗುವುದಿಲ್ಲ" ಎಂಬ ಸ್ವಾಮಿ ವಿವೇಕಾನಂದರ ಧೀರ ನುಡಿಗಳನ್ನು ಮಾರ್ಗದರ್ಶಕ ಸೂತ್ರವನ್ನಾಗಿ ಸ್ವೀಕರಿಸಿದ ಮಠವು, ಗಂಧದಕಡ್ಡಿ ತಯಾರಿಕೆ, ಹೊಲಿಗೆ, ಕಸೂತಿ – ಮುಂತಾದ ಕುಶಲಕಲೆಗಳಲ್ಲಿ ಹೆಣ್ಣುಮಕ್ಕಳಿಗೆ ತರಬೇತಿ ಕಾರ್ಯಕ್ರಮಗಳನ್ನು ನೀಡುತ್ತಿದೆ. ಆ ಮೂಲಕ ಅವರು ಸ್ವಾವಲಂಬಿಗಳಾಗಿ ಬದುಕಲು ಅವಕಾಶವನ್ನು ಕಲ್ಪಿಸಿದೆ. ಕಾಲಕಾಲಕ್ಕೆ ವೈದ್ಯಕೀಯ ಚಿಕಿತ್ಸಾಶಿಬಿರ, ಅನ್ನದಾನ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬೆಂಗಳೂರಿನ ಶ್ರೀಶಾರದಾಮಠವು ಸಿದ್ಧರಬೆಟ್ಟವನ್ನು ಒಂದು ಆದರ್ಶಗ್ರಾಮವನ್ನಾಗಿ ಪರಿವರ್ತಿಸಿದೆ.

೨೦೧೦, ಮೇ ೨ನೆಯ ತಾರೀಖು ಕರ್ನಾಟಕದ ಶ್ರೀಶಾರದಾಮಠದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವು ಆರಂಭವಾಯಿತು. ಚಿಕ್ಕಮಗಳೂರಿನಲ್ಲಿ ಶ್ರೀಶಾರದಾಮಠದ ಮತ್ತೊಂದು ಶಾಖೆ ಅಂದು ಉದ್ಘಾಟನೆಗೊಂಡಿತು. ಇದು ಕರ್ನಾಟಕ ಜನರಿಗೆಲ್ಲ ಹೆಮ್ಮೆ ತರುವ ವಿಷಯವೇ ಸರಿ. ಕಾಫಿ ಬೆಳೆಗಾರರಾದ ಶ್ರೀ ಗಂಗಯ್ಯ ಹೆಗಡೆ ಅವರ ಧರ್ಮಪತ್ನಿ ಶ್ರೀಮತಿ ವಾಸಂತಿ ಹೆಗಡೆ ಅವರ ನೇತೃತ್ವದಲ್ಲಿ, ಚಿಕ್ಕಮಗಳೂರಿನ ಭಕ್ತರೆಲ್ಲ ಸೇರಿ, ೨೦೦೬ ರಲ್ಲಿ 'ಶ್ರೀರಾಮಕೃಷ್ಣ ಶಾರದಾ ಸೇವಾ ಟ್ರಸ್ಟ್' ಎಂಬ ಸೇವಾಸಂಸ್ಥೆಯನ್ನು ಆರಂಭಿಸಿದರು. ಇವರಲ್ಲಿ ಬಹುತೇಕರು ಸ್ತ್ರೀಯರೇ. ಸರ್ಕಾರ ಕೊಡಮಾಡಿದ ನಾಲ್ಕು ಎಕರೆ ಜಾಗದಲ್ಲಿ, ಅತ್ಯಂತ ಪರಿಶ್ರಮದಿಂದ ನಿರ್ಮಾಣಗೊಂಡ ಭವ್ಯವೂ ಸುಂದರವೂ ಆದ ಮಂದಿರದ ಉದ್ಘಾಟನೆಯನ್ನು ೨೦೦೭, ಮಾರ್ಚ್ ೩ ರಂದು ಬೆಂಗಳೂರಿನ ಶ್ರೀಶಾರದಾಮಠದ ಅಧ್ಯಕ್ಷರಾದ ಪೂಜ್ಯ ಶುಭ್ರಪ್ರಾಣಾ ಮಾತಾಜಿಯವರು ನೆರವೇರಿಸಿದರು. ಅದಾಗಿ ಕೇವಲ ಮೂರು ವರ್ಷಗಳಲ್ಲಿ, ೨೦೧೦, ಮೇ ೩ರಂದು ನಡೆದ ಭವ್ಯ ಸಮಾರಂಭದಲ್ಲಿ ಈ ಆಶ್ರಮವನ್ನು ಅಧಿಕೃತವಾಗಿ ಶ್ರೀಶಾರದಾಮಠಕ್ಕೆ, ಅದರ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಅಮಲಪ್ರಾಣಾ ಮಾತಾಜಿಯವರ ಸಮ್ಮುಖದಲ್ಲಿ ಹಸ್ತಾಂತರಿಸಲಾಯಿತು. ಹೀಗೆ **'ಬಾ ಶ್ರೀಗುರುದೇವನೆ ಬಾ, ಶ್ಯಾಮಲಕಾನನ ಶೃಂಗ ತರಂಗಿತ ಸಹ್ಯಾದ್ರಿಯ ಸುಂದರ ಮಂದಿರಕೆ'** ಎಂಬ ಶ್ರೀಕುವೆಂಪು ಅವರ ಆದರದ ಆಹ್ವಾನವನ್ನು ಶ್ರೀಮಾತೆ ಆಲಿಸಿದ್ದಾರೆ. ಹಾಗೆಂದೇ, ಮಲೆನಾಡಿನ ಮಡಿಲಾದ ಚಿಕ್ಕಮಗಳೂರಿನ ಸಸ್ಯಶ್ಯಾಮಲ, ಗಿರಿಶೃಂಗಶೋಭಿತ, ನಿಸರ್ಗರಮಣೀಯ ತಾಣದಲ್ಲಿ ಶ್ರೀಶಾರದಾಮಠದ ಸ್ಥಾಪನೆಯೊಂದಿಗೆ ಶ್ರೀಮಾತೆಯವರು ಪದಾರ್ಪಣೆ ಮಾಡಿದ್ದಾರೆ. ಇದು ಈ ನಾಡಿನ ಜನತೆಯ ಭಾಗ್ಯವೇ ಆಗಿದೆ.

•